ಓ ಎಸ್ ನಂ. 17/2021
ಡಿ ಡಬ್ಲ್ಯೂ 4
ದಿನಾಂಕ 23/03/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿಗಳ ಪರಃ ಶ್ರೀ ಎಸ್ ಸಿ ಎನ್ ವಕೀಲರಿಂದಃ

ನಾನು ಹುಟ್ಟಿದಾಗಿನಿಂದಲೂ ಅಂದೇನಹಳ್ಳಿ ಗ್ರಾಮದಲ್ಲೇ ವಾಸಿಸುತ್ತಿದ್ದೇನೆ. ಮೃತ ಸಿದ್ದಪ್ಪ ಮತ್ತು ವಾದಿಗಳು ಮತ್ತು ಪ್ರತಿವಾದಿಗಳು ನನಗೆ ಪರಿಚಯ ಇದ್ದಾರ ಎಂದರೆ ಸಾಕ್ಷಿ ಹೌದು ಅವರು ನಮ್ಮ ಗ್ರಾಮಸ್ಥರೇ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ಮತ್ತು 2 ರ ಆಸ್ತಿಗಳು ವಾದಿಗಳು ಮತ್ತು 1 ಮತ್ತು 2 ನೇ ಪ್ರತಿವಾದಿಗಳ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ, ಆದರೆ ಅದು ಸಿದ್ದಪ್ಪರವರ ಆಸ್ತಿ ಎಂದು ನುಡಿಯುತ್ತಾರೆ. ಸದರಿ ದಾವಾ ಐಟಂ ನಂ.1 ಮತ್ತು 2 ರ ಆಸ್ತಿಗಳು ಸಿದ್ದಪ್ಪರವರಿಗೆ ಅವರ ತಂದೆಯು ಮೂಲಕ ಬಂದಿರುತ್ತದೆ ಎಂದರೆ ಸಾಕ್ಷಿ ಹೌದು ಅವುಗಳನ್ನು ಹಂಚಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ದಾವಾ ಐಟಂ ನಂ.1 ರ ಆಸ್ತಿ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ದಾವಾ ಐಟಂ ನಂ.2 ರ ಆಸ್ತಿಯನ್ನು ಸಿದ್ದಪ್ಪರವರ ಮಕ್ಕಳು ತಲಾ 12 ಗುಂಟೆಯಂತೆ ಹಂಚಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಕಾಳಮ್ಮರವರ ಹೆಸರಿನಲ್ಲಿರುವ ದಾವಾ ಐಟಂ ನಂ.1 ರ ಸ್ವತ್ತಿನ ಬಗ್ಗೆ ನನಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಇಲ್ಲವೆಂದು

ನುಡಿಯುತ್ತಾರೆ. ದಾವಾ ಐಟಂ ನಂ.2ರ ಸ್ವತ್ತು ಸಿದ್ದಪ್ಪರವರ ಅಣ್ಣತಮ್ಮಂದಿರು ವಿಭಾಗ ಮಾಡಿಕೊಂಡಂತೆ ಸಿದ್ದಪ್ಪರವರ ಹೆಸರಿಗೆ ಖಾತೆ ಬಂದಿರುತ್ತದೆ ಎಂದರೆ ಸರಿ. ಸಿದ್ದಪ್ಪ ಹಾಗೂ ಅವರ ಸಹೋದರರು ಮಾಡಿಕೊಂಡಂತಹ ವಿಭಾಗದ ಪಂಚಾಯಿತಿಯಲ್ಲಿ ನಾನು ಖುದ್ದಾಗಿ ಹಾಜರಿದ್ದೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಈ ದಾವೆಯ ವಾದಿಗಳು ಯಾರ ಮಕ್ಕಳು ಎಂದರೆ ಸಾಕ್ಷಿ ಸಿದ್ದಪ್ಪರವರ ಮಕ್ಕಳು ಎಂದು ನುಡಿಯುತ್ತಾರೆ. ಸಿದ್ದಪ್ಪರವರು ಮಾರಾಟ ಮಾಡಿದ ಸ್ವತ್ತಿನ ವ್ಯವಹಾರದ ಸಮಯದಲ್ಲಿ ಯಾರೆಲ್ಲಾ ಇದ್ದರು ಎಂದರೆ ಸಾಕ್ಷಿ ಸದರಿ ಸಿದ್ದಪ್ಪ ಅವರ ಹೆಂಡತಿಯಾದ ಕಾಳಮ್ಮ ಮತ್ತು ಅವರ ಮಗ ಯೋಗೀಶ್ ರವರು ಎಂದು ನುಡಿಯುತ್ತಾರೆ. ಸ್ವತ್ತನ್ನು ಮಾರಾಟ ಮಾಡುವಂತೆ ನನ್ನನ್ನು ಯಾರು ಕೇಳಿಕೊಂಡಿದ್ದರು ಎಂದರೆ ಸಾಕ್ಷಿ ಸಿದ್ದಪ್ಪ ಮತುತ ಅವರ ಹೆಂಡತಿ ಕಾಳಮ್ಮ ಎಂದು ನುಡಿಯುತ್ತಾರೆ. ಸಿದ್ದಪ್ಪರವರು ಮ್ಯಾಕ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದು ನಾನು ಅವರನ್ನು ಆಸ್ಪತ್ರೆಗೆ ಹೋಗಿ ನೋಡಿಕೊಂಡು ಬಂದಿರುತ್ತೇನೆ. ಆನಂತರದಲ್ಲಿ ಮನೆಗೆ ಬಂದ ಸಮಯದಲ್ಲಿ ಜಮೀನನ್ನು ಮಾರಾಟ ಮಾಡಿಸುವಂತೆ ನನ್ನನ್ನು ಕೇಳಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆಗಾಗಿ ನಾನೇ ಖುದ್ದಾಗಿ ದಾವಾ ಐಟಂ ನಂ.2ರ ಆಸ್ತಿಯ ವ್ಯವಹಾರವನ್ನು ಮಾಡಿರುತ್ತೇನೆ. ಆ ರೀತಿ ವ್ಯಾಪಾರದ ಬಗ್ಗೆ ಮಾತನಾಡುವ ಸಮಯದಲ್ಲಿ ಸಿದ್ದಪ್ಪರವರ ಮೊದಲನೇ ಹೆಂಡತಿಯ

ಮಕ್ಕಳಾದ ವಾದಿಗಳ ಬಗ್ಗೆ ನಾನು ವಿಚಾರ ಮಾಡಿಲ್ಲವೇ ಎಂದರೆ ಸಾಕ್ಷಿ ಹೌದು ವಿಚಾರ ಮಾಡಿದ್ದೇನೆ, ಸಿದ್ದಪ್ಪರವರು ಅವರಿಗೆ ಕೊಡಬೇಕಾದುದ್ದನ್ನು ಈಗಾಗಲೇ ಕೊಟ್ಟಾಗಿದೆ, ತನಗೆ ಹಣದ ಅವಶ್ಯಕತೆ ಇದೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಗಳಿಗೆ ಸಿದ್ದಪ್ಪರವರು ಕೊಡಬೇಕಾದುದ್ದನ್ನು ಕೊಟ್ಟಿರುತ್ತಾರಾ ಎಂದು ನಾನು ಕೇಳಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ದಾವಾ ಐಟಂ ನಂ.2ರ ಆಸ್ತಿಯನ್ನು ಮಾರಾಟ ಮಾಡಿಸಿಕೊಡುವಂತೆ ಸಿದ್ದಪ್ಪರವರ ನನಗೆ ಯಾವಾಗ ಕೇಳಿರುತ್ತಾರೆ ಎಂದರೆ ಸಾಕ್ಷಿ ಈಗ್ಗೆ ಸುಮಾರು 7 ವರ್ಷಗಳ ಹಿಂದೆ ಎಂದು ನುಡಿಯುತ್ತಾರೆ. ಸಿದ್ದಪ್ಪರವರು ಮ್ಯಾಕ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಮಯದಲ್ಲಿ ಇನ್ನೂ ಸರ್ಕಾರಿ ನೌಕರಿಯಲ್ಲಿದ್ದು, ನಿವೃತ್ತಿ ಆಗಿರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಸಿದ್ದಪ್ಪರವರಿಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ವಿಚಾರ ಮಾಡಿದ್ದೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಯಾವ ಇಸವಿಯಲ್ಲಿ ಮತ್ತು ಯಾವ ಖಾಯಿಲೆ ಬಾಬ್ತು ಸಿದ್ದಪ್ಪರವರು ಮ್ಯಾಕ್ಸ ಆಸ್ಪತ್ರೆಗೆ ದಾಖಲಾಗಿದ್ದರು ಎಂದರೆ ಸಾಕ್ಷಿ ನಿಖರವಾಗಿ ಗೊತ್ತಿಲ್ಲ, ಆದರೆ ನಾನು ಆಸ್ಪತ್ರೆಗೆ ಹೋಗಿ ನೋಡಿಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2ರ ಆಸ್ತಿಯನ್ನು ಖರೀದಿ ಮಾಡಿರುವ 4ನೇ ಪ್ರತಿವಾದಿ ಗಣೇಶಾಚಾರಿರವರು ಸದರಿ ಸಿದ್ದಪ್ಪರವರ ಸಹೋದರ ಆಗಿದ್ದು, ವಾದಿಗಳ ಚಿಕ್ಕಪ್ಪ ಎಂದರೆ

ಸರಿ. ಸದರಿ ಗಣೇಶಾಚಾರಿರವರು ದಾವಾ ಐಟಂ ನಂ.2ರ ಸ್ವತ್ತಿನ ಬಗ್ಗೆ ವಾದಿಗಳ ಬಳಿ ಏನಾದರೂ ವಿಚಾರ ಮಾಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ದಾವಾ ಐಟಂ ನಂ.2ರ ಆಸ್ತಿಯ ಸಿದ್ದಪ್ಪರವರ ತಂದೆ ಕಡೆಯಿಂದ ಸಿದ್ದಪ್ಪರವರಿಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಸಿದ್ದಪ್ಪರವರ ವಾರಸುದಾರರೆಲ್ಲಾರಿಗೂ ಸಹ ಸಮಾನ ಹಕ್ಕು ಇರುತ್ತದೆ ಎಂದರೆ ಸರಿ. ಆದ್ದರಿಂದ ದಾವಾ ಐಟಂ ನಂ.2ರ ಆಸ್ತಿಯಲ್ಲಿ ವಾದಿಗಳಿಗೂ ಸಹ ಹಕ್ಕು ಮತ್ತು ಹಿಸ್ಸೆ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಿದ್ದಪ್ಪರವರಿಗೆ ದಾವಾ ಐಟಂ ನಂ.2ರ ಸ್ವತ್ತನ್ನು ಮಾರಾಟ ಮಾಡುವ ಯಾವುದೇ ದರ್ದು ಇಲ್ಲದೆ ಇದ್ದರೂ ಸಹ ನಾನು ಮತ್ತು 4ನೇ ಪ್ರತಿವಾದಿ ಒಂದೇ ಊರಿನವರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದಪ್ಪರವರು ಅವರು ಜೀವಿತಾವಧಿಯಲ್ಲಿ ಶಿವಮೊಗ್ಗದ ಮ್ಯಾಕ್ಸ ಆಸ್ಪತ್ರೆಯಲ್ಲಿ ದಾಖಲಾಗಿಲ್ಲ ಎಂದರೆ ಸರಿಯಲ್ಲ. ಸಿದ್ದಪ್ಪರವರು ನಿವೃತ್ತಿ ಹೊಂದುವ ಕೊನೆಯ ಹಂತದಲ್ಲಿ 1 ಮತ್ತು 2ನೇ ಪ್ರತಿವಾದಿಗಳು ಅಂದೇನಹಳ್ಳಿಯಲ್ಲಿರುವ ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡಿ ಶಿವಮೊಗ್ಗ ಜಿಲ್ಲೆಯ ಹೊಳಲೂರು ಗ್ರಾಮದಲ್ಲಿ ಆಸ್ತಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ಹೊಳಲೂರು ಗ್ರಾಮದಲ್ಲಿ ಮನೆ ಕಟ್ಟಿರುವ ವಿಚಾರ ಮಾತ್ರ ನನಗೆ ಗೊತ್ತು ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.